JULY 19, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1. ಕಾರ್ಮಿಕರ ವಿಮೆ ಯೋಜನೆಗೆ, ತಮ್ಮ ಸಿಬ್ಬಂದಿ ಹೆಸರು ನೋಂದಣಿ ಮಾಡದ, ಉದ್ಯೋಗದಾತರು, ಯಾವುದೇ ಪರಿಶೀಲನೆ ಮತ್ತು ಹಿಂಬಾಕಿ ಪಾವತಿ ಇಲ್ಲದೇ, ನೋಂದಣಿ ಮಾಡಿಸಲು, ಕಾರ್ಮಿಕರ ರಾಜ್ಯ ವಿಮಾ ನಿಗಮ – ಇ.ಎಸ್.ಐ.ಸಿ. ಒಂದು ಬಾರಿ, ಅವಕಾಶ ಕಲ್ಪಿಸಿದೆ. ಹತ್ತು ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರು, ಕೆಲಸ ಮಾಡುವ ಸಂಸ್ಥೆ, ಕಾರ್ಖಾನೆಗಳು, ಇ.ಎಸ್.ಐ. ನೋಂದಣಿ ಮಾಡಿಸುವುದು, ಸಾಮಾಜಿಕ ಭದ್ರತೆಗೆ ವಂತಿಗೆ ಕಟ್ಟುವುದು, ಕಡ್ಡಾಯ. ಡಿಸೆಂಬರ್ 31ರ ವರೆಗೆ, ಇ.ಎಸ್.ಐ.ಸಿ., ಶ್ರಮ ಸುವಿಧಾ ಪೋರ್ಟಲ್‌ನಲ್ಲಿ ನೋಂದಣಿ ಮಾಡಬಹುದು.**

<><><>

**2. 'ಬೋಲಾವಾ ವಿಠ್ಠಲ.. ಕನ್ನಡ–ಮರಾಠೀ ಅಭಂಗ ದಾಸವಾಣಿ ಗೀತಗಾಯನ' ಕಾರ್ಯಕ್ರಮ, ಧಾರವಾಡದ ಸೃಜನಾ ರಂಗಮಂದಿರದಲ್ಲಿ, ಇಂದು ಸಂಜೆ 5.30ಕ್ಕೆ, ಆಯೋಜಿತವಾಗಿದೆ. ವಿಧಾನಸಭೆ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಡಾಕ್ಟರ್ ರಾಜನ್ ದೇಶಪಾಂಡೆ, ಡಾಕ್ಟರ್ ಸೌಭಾಗ್ಯಾ ಕುಲಕರ್ಣಿ, ಶಶಿ ಸಾಲಿ ಹಾಗೂ ಪ್ರಾಚಾರ್ಯ ಶಶಿಧರ ತೋಡಕರ, ಅಥಿತಿಗಳಾಗಿ ಭಾಗವಹಿಸಲಿದ್ದಾರೆ. ಕನ್ನಡ–ಮರಾಠೀ ಅಭಂಗ ದಾಸವಾಣಿ ಕಾರ್ಯಕ್ರಮದ ಕುರಿತು, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ, ಶ್ರೀ ಕುಮಾರೇಶ್ವರ ಕಲ್ಚರಲ್ ಸೊಸಾಯಿಟಿ ಅಧ್ಯಕ್ಷ, ಮಲ್ಲಿಕಾರ್ಜುನ ಚಿಕ್ಕಮಠ.**

<><><>

**ಮಲ್ಲಿಕಾರ್ಜುನ ಚಿಕ್ಕಮಠ ಧ್ವನಿ 40 ಸೆಕೆಂದುಗಳು**

<><><>

**3. ಹಾಸನ ಜಿಲ್ಲೆ, ಆಲೂರು ತಾಲೂಕಿನ, ಕದಾಳು, ಕವಳಿಕೆರೆ, ಹೆದ್ದುರ್ಗ ಸೇರಿದಂತೆ, ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಬಿ.ಆರ್. ಪೂರ್ಣಿಮಾ, ಬಹು ಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಹಾಗೂ ಜಲ ಜೀವನ್ ಮಿಷನ್ ಯೋಜನೆ ಅಡಿ ಕಾಮಗಾರಿಗಳ ಪ್ರಗತಿ, ಪರಿಶೀಲಿಸಿದರು.**

<><><>

**4. ಆಗಸ್ಟ್ 15, ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ, ಪ್ಲಾಸ್ಟಿಕ್ ಧ್ವಜಗಳ ಮಾರಾಟ ತಡೆಯುವಂತೆ, ಶಾಲಾ ಶಿಕ್ಷಣ ಇಲಾಖೆ ಕ್ರಮಕೈಗೊಳ್ಳಲು, ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ನಿರ್ದೇಶಿಸಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯ, ಪೂರ್ವ ಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ, ಮಾತನಾಡಿದರು.**

<><><>

**5.** ಧಾರವಾಡ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭುವನೇಶ ಪಾಟೀಲ, ಅಣ್ಣಿಗೇರಿ ತಾಲೂಕಿನ ನಲವಡಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಮಹಾತ್ಮ ಗಾಂಧಿ ನರೇಗಾ ಯೋಜನೆ ಸೇರಿದಂತೆ, ಕೇಂದ್ರ ಪುರಸ್ಕೃತ ಹಲವು ಯೋಜನೆಗಳ, ಪ್ರಗತಿ ಅವಲೋಕಿಸಿದರು.

<><><>

**7.** ಬೀದರ ಜಿಲ್ಲೆ, ಬಸವಕಲ್ಯಾಣ ತಾಲೂಕಿನ, ಮಲ್ಲಿಕಾರ್ಜುನ ವಾಡಿ ಗ್ರಾಮದಲ್ಲಿ, ಜಲ ಜೀವನ ಮಿೀ ’ನ್ ಕಾಮಗಾರಿ, ಪೂರ್ಣಗೊಂಡಿದೆ; ಹರ ಘರ ಜಲ್ ಗ್ರಾಮವೆಂದು ಘೋಷಿಸಿ, ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಗಿರೀಶ ಬದೋಲೆ, ತಿಳಿಸಿದ್ದಾರೆ.

<><><>

**8.** ಚಿಕ್ಕಮಗಳೂರು ತಾಲೂಕಿನ ಅಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ, **22** ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ, ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಕಟ್ಟಡಕ್ಕೆ, ಶಾಸಕಿ ನಯನಾ ಮೋಟಮ್ಮ ಶಿಲಾನ್ಯಾಸ ನೆರವೇರಿಸಿದರು. ಬಡವರು, ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳಿಗೆ ಶೈಕ್ಷಣಿಕ ಹಾಗೂ ವಸತಿ ಸೌಲಭ್ಯ ಕಲ್ಪಿಸಲು, ಈ ಶಾಲೆ ಸಹಕಾರಿಯಾಗಲಿದೆ ಎಂದರು.

<><><>

**9.** ಗೃಹ ಆರೋಗ್ಯ ಯೋಜನೆಯಡಿ, ಆರೋಗ್ಯ ಇಲಾಖೆ ಸಿಬ್ಬಂದಿ, ಮನೆ ಮನೆಗೆ ಭೇಟಿ ನೀಡಿ, **30** ವರ್ಷ ಮೇಲ್ಪಟ್ಟ ಎಲ್ಲರಿಗೂ ಆರೋಗ್ಯ ತಪಾಸಣೆ ನಡೆಸಲಿದ್ದಾರೆ ಎಂದು, ಬೀದರ ಜಿಲ್ಲೆ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಗೃಹ ಆರೋಗ್ಯ ಯೋಜನೆಗೆ ಚಾಲನೆ ನೀಡಿ, ಮಾತನಾಡಿದರು.

<><><>

ಇತ್ತೀಚೆಗೆ, ಬೀದರ – ಬ್ರಿಮ್ಸ್ ಆಸ್ಪತ್ರೆಯಲ್ಲಿ, ವಿದ್ಯುತ್ ವ್ಯತ್ಯಯದಿಂದ, ರೋಗಿಗಳಿಗೆ ತೊಂದರೆ ಉಂಟಾದ ಹಿನ್ನೆಲೆ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

**10.** ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲೂಕಿನ, ದೇವನಗೂಲ್ ಗ್ರಾಮದ ಬಳಿ, ಇಂದು ಬೆಳಗ್ಗೆ ಪ್ರವಾಸಿಗರ ಖಾಸಗಿ ಬಸ್ ಮಗುಚಿ, **25**ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯಗಳಾಗಿವೆ. ಇಬ್ಬರ ಸ್ಥಿತಿ ಗಂಭೀರವಾಗಿದೆ. ಮೂಡಿಗೆರೆ ಹಾಗೂ ಚಿಕ್ಕಮಗಳೂರಿನ ವಿವಿಧ ಆಸ್ಪತ್ರೆಗಳಿಗೆ ಗಾಯಾಳುಗಳನ್ನು ದಾಖಲಿಸಲಾಗಿದೆ.

<><><>

**11.** ರಾಜ್ಯದ ಕರಾವಳಿ ಸೇರಿದಂತೆ, ಮಲೆನಾಡು ಜಿಲ್ಲೆಗಳಲ್ಲಿ, ಇಂದು ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ವಿಕೋಪ ನಿರ್ವಹಣೆ ಮೇಲುಸ್ತುವಾರಿ ಕೇಂದ್ರ, ತಿಳಿಸಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಅಲ್ಲಲ್ಲಿ ಭಾರಿ ಹಾಗೂ ಅತ್ಯಧಿಕ ಮಳೆ, ಒಳನಾಡು ಜಿಲ್ಲೆಗಳಲ್ಲಿ, ಚದುರಿದಂತೆ ಮಳೆಯಾಗುವ ಸಾಧ್ಯತೆಯಿದೆ.

**12.** ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿ, ಎಚ್.ಎಸ್. ಯಶವಂತಗೌಡ, ಕಿಕ್ ಬಾಕ್ಸಿಂಗ್‌ನಲ್ಲಿ ಭರವಸೆ ಮೂಡಿಸಿದ್ದಾರೆ. ಮೈಸೂರು ಜಿಲ್ಲೆ, ಎಚ್.ಡಿ. ಕೋಟೆ ತಾಲೂಕಿನ, ಹೈರಿಗೆ ಗ್ರಾಮದ ಯಶವಂತ, ಹುಬ್ಬಳ್ಳಿಯ ಜಿ.ಕೆ. ಕಾನೂನು ಕಾಲೇಜಿನಲ್ಲಿ ಓದುತ್ತಿದ್ದಾರೆ. ಕಿಕ್ ಬಾಕ್ಸಿಂಗ್‌ನಲ್ಲಿ **63** ಕಿಲೋ ವಿಭಾಗದಲ್ಲಿ ಸ್ಪರ್ಧಿಸಿ, ಬೆಳ್ಳಿ ಪದಕ ಜಯಿಸಿದ್ದಕ್ಕಾಗಿ, ಕಾನೂನು ವಿಶ್ವವಿದ್ಯಾಲಯ, **80** ಸಾವಿರ ರೂಪಾಯಿ ಶಿಷ್ಯವೇತನ ನೀಡಿದೆ.

**<><><>**

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

**ಹರ್ಷ.**